ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
2ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001
ದೂರವಾಣಿ ಸಂಖ್ಯೆ:080-22372738, E-mail:karnregs@gmail.com

ಸಂಖ್ಯೆ: ಗ್ರಾಅಪ 594 ಉಖಾಯೋ 2014

ದಿನಾಂಕ:27-08-2014

## ಸುತ್ತೋಲೆ

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ವಿಕಲಚೇತನರಿಗೆ ಹಾಗೂ ಹಿರಿಯ ನಾಗರೀಕರಿಗೆ ಮಾರ್ಗ ಸೂಚಿಗಳ ಪ್ರಕಾರ ಸೌಲಭ್ಯಗಳನ್ನು ಒದಗಿಸಿರುವ ಕುರಿತು ಹಾಗೂ ಅವರ ಹಕ್ಕುಗಳ ರಕ್ಷಣೆಗೆ ಆದ್ಯತೆ ನೀಡಿದ ಬಗ್ಗೆ.

ಉಲ್ಲೇಖ: 1) ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದವರು ಹೊರಡಿಸಿರುವ ಕಾರ್ಯಚರಣೆಯ ಮಾರ್ಗಸೂಚಿಗಳು 2013 ನಾಲ್ಕನೇ ಅವೃತ್ತಿ.
2) ಸರ್ಕಾರದ ಆದೇಶ ಸಂ: ಗ್ರಾಅಪ 451 ಉಖಾಯೋ 2014 ಬೆಂಗಳೂರು ದಿನಾಂಕ:02-08-2014

****

ದೇಶದ ಗ್ರಾಮೀಣ ಭಾಗದಲ್ಲಿರುವ ಬಡ ಕುಟುಂಬಗಳ ಜೀವನೋಪಾಯದ ಭದ್ರತೆಯನ್ನು ಹೆಚ್ಚಿಸುವುದು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಇದರ ಜೊತೆಗೆ ಗ್ರಾಮೀಣ ಸಮಾಜದಲ್ಲಿ ವಿವಿಧ ದುರ್ಬಲ ಗುಂಪುಗಳು ಕೂಡ ಇರುತ್ತದೆ. ಇಂತಹ ದುರ್ಬಲ ಗುಂಪುಗಳಗೆ ಸಾಮಾಜಿಕ ಸಂರಕ್ಷಣೆಯನ್ನು ಒದಗಿಸುವುದು ಅತ್ಯವಶ್ಯಕವಾಗಿರುತ್ತದೆ ಮತ್ತು ಇದರ ಕಡೆ ಹೆಚ್ಚಿನ ಗಮನ ಹರಿಸಬೇಕಾಗಿರುತ್ತದೆ. ಇಲ್ಲದಿದ್ದಲ್ಲಿ ಈ ಗುಂಪುಗಳು ಅಭಿವೃದ್ಧಿ ಪರದಿಂದ ಹೊರಗುಳಿಯಬೇಕಾಗುತ್ತದೆ. ದುರ್ಬಲ ಗುಂಪುಗಳನ್ನು ಕೇಂದ್ರ ಸರ್ಕಾರವು ಈ ಕೆಳಕಂಡಂತೆ ವಿಶೇಷ ಗುಂಪುಗಳಾಗಿ ವರ್ಗೀಕರಿಸಲಾಗುತ್ತದೆ.

1) ವಿಕಲಚೇತನರು
2) ಆದಿಕಾಲದ ಬುಡಕಟ್ಟು ಜನಾಂಗ
3) ಅಲೆಮಾರಿ ಬುಡಕಟ್ಟು ಜನಾಂಗ
4) ಸೂಚಿತ ಬುಡಕಟ್ಟು ಜನಾಂಗ
5) ವಿಶೇಷ ಸ್ಥಿತಿಯಲ್ಲಿರುವ ಮಹಿಳೆಯರು
6) 65 ವರ್ಷ ಮೀರಿದ ಹಿರಿಯ ನಾಗರೀಕರು
7) ಎಚ್.ಐ.ವಿ. ಪೀಡಿತರು
8) ಆಂತರಿಕವಾಗಿ ಸ್ಥಳಾಂತರಿಸಲ್ಪಟ್ಟ ಜನರು

ಮೇಲೆ ಗುರುತಿಸಲಾದ ವಿಶೇಷ ಗುಂಪುಗಳಲ್ಲಿ ವಿಕಲಚೇತನರು ಮತ್ತು 65 ವರ್ಷ ಮೀರಿದ ಹಿರಿಯ ನಾಗರೀಕರಿಗೆ ಈಗಾಗಲೇ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಈ ಹಿಂದೆ ಕಾಮಗಾರಿಗಳಲ್ಲಿ ನಿರ್ವಹಿಸುವವರಿಗೆ ಕೆಲಸದ ಪ್ರಮಾಣದಲ್ಲಿ ಶೇಕಡಾ 25 ರಷ್ಟು ರಿಯಾಯಿತಿಯನ್ನು ನೀಡಿದ್ದು, ಅದನ್ನು ಇತ್ತೀಚಿಗೆ ಸದರಿ ಗುಂಪುಗಳಿಗೆ ಕೆಲಸ ಪ್ರಮಾಣದಲ್ಲಿ ಶೇಕಡಾ 50ರಷ್ಟಿಗೆ ರಿಯಾಯಿತಿಯನ್ನು ಹೆಚ್ಚಿಸಿ ಆದೇಶವನ್ನು ಉಲ್ಲೇಖ (2)ರಲ್ಲಿ ಹೊರಡಿಸಲಾಗಿದೆ. ಇದಲ್ಲದೇ, ವಿಶೇಷವಾಗಿ ವಿಕಲಚೇತನರಿಗೆ ತಮ್ಮ ನಿವಾಸದಿಂದ ಕಾಮಗಾರಿ ಸ್ಥಳಕ್ಕೆ ಹೋಗಿಬರಲು ಕೂಲಿದರದಲ್ಲಿ ಶೇಕಡಾ 10 ರಷ್ಟು ಪ್ರಮಾಣ ಭತ್ಯೆಯನ್ನಾಗಿ ನೀಡುತ್ತಿರುವುದು ತಮಗೆ ತಿಳಿದಿರುವ ವಿಷಯವಾಗಿರುತ್ತದೆ. ವಿಕಲಚೇತನರನ್ನು ಅಶಕ್ತ ಗುಂಪಾಗಿ ಪರಿಗಣಿಸಲಾಗಿದೆ. ವಿಕಲಚೇತನರ ಅಂಗವೈಕಲ್ಯದ ಪ್ರಮಾಣವನ್ನು ಶೇಕಡಾ 40 ರಷ್ಟು ಹೊಂದಿರುವವರನ್ನು ವಿಶೇಷ ವರ್ಗವಾದ ದುರ್ಬಲ ಗುಂಪೆಂದು ಪರಿಗಣಿಸಲಾಗಿರುತ್ತದೆ. ಸರ್ಕಾರವು ಕೂಡ ಈ ಗುಂಪಿಗೆ ಹೆಚ್ಚಿನ ಆದ್ಯತೆ ನೀಡಿರುತ್ತದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ

ವಿಕಲಚೇತನರನ್ನು ಒಂದು ಕುಟುಂಬವಾಗಿ ಪರಿಗಣಿಸಿ, ಅವರಿಗೆ ಉದ್ಯೋಗ ಚೀಟಿಯನ್ನು ಪ್ರತ್ಯೇಕವಾಗಿ ನೀಡಿ, ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳ ಖಾತರಿ ಉದ್ಯೋಗವನ್ನು ದೊರಕುವಂತೆ ಮಾಡುವ ಜವಾಬ್ದಾರಿ ನಮ್ಮ ಮೇಲೆ ಇರುತ್ತದೆ.

ಹಿರಿಯ ನಾಗರೀಕರಿಗೆ ಸಂಬಂಧಿಸಿದಂತೆ, ಅವರುಗಳ ಕುಟುಂಬದವರು ಅಲಕ್ಷ್ಯಮಾಡಿ ಪೋಷಣೆಯನ್ನು ಮಾಡದಿದ್ದಲ್ಲಿ ಅಂತಹ ಹಿರಿಯ ನಾಗರೀಕರಿಗೆ ವಿಶೇಷವಾದ ಬೆಂಬಲ ನೀಡುವುದು ನಮ್ಮ ಆದ್ಯ ಕರ್ತವ್ಯವಾಗಿರುತ್ತದೆ. ಈ ಗುಂಪಿನ ವ್ಯಕ್ತಿಗಳನ್ನೂ ಸಹ ವಿಶೇಷ ವರ್ಗದಡಿ ಗುರುತಿಸಿ ಪ್ರೋತ್ಸಾಹಿಸುವುದು ನಮ್ಮ ಕರ್ತವ್ಯವಾಗಿರುತ್ತದೆ ಮತ್ತು ಇವರುಗಳಿಗೆ ಕೆಲಸ ಮಾಡಬಹುದಾದ ಕಡಿಮೆ ದೈಹಿಕ ಶ್ರಮ ಬಯಸುವ ಕೆಲಸಗಳನ್ನು ಗುರುತಿಸಿ ನೀಡಬೇಕಾಗಿರುತ್ತದೆ.

ಈ ಸಂಬಂಧ, ವಿಕಲಚೇತನರು ನಿರ್ವಹಿಸಬೇಕಾದ ಕೆಲಸದ ಕಾಮಗಾರಿಗಳನ್ನು ಅವರುಗಳ ಅಂಗವೈಕಲ್ಯದ ವಿವಿಧ ಪ್ರಮಾಣಗಳನ್ನು ಆಧರಿಸಿ ಹಾಗೂ ಹಿರಿಯ ನಾಗರೀಕರು ಅವರುಗಳ ಶಕ್ತಿ ಸಾಮರ್ಥ್ಯಗಳಿಗೆ ಅನುಗುಣವಾಗಿ ಕೆಲಸ ನಿರ್ವಹಿಸಬೇಕಾದ ಕುಟುಂಬಗಳನ್ನು ಮಾರ್ಗಸೂಚಿಗಳಲ್ಲಿ ಸೂಚಿಸಿದಂತೆ ಪ್ರತ್ಯೇಕವಾಗಿ ಗುರುತಿಸಿ ಅನುಬಂಧದಲ್ಲಿ ಲಗತ್ತಿಸಿ ತೋರಿಸಿದೆ.

ಅಂಗವಿಕಲರಿಗೆ ಗುರುತಿಸಲಾದ ಕಾಮಗಾರಿಗಳ ಕೆಲಸವನ್ನು ಸಾಧ್ಯವಾದಷ್ಟು ಯೋಜನೆ ಕೆಲಸಕ್ಕೆ ಆಯ್ಕೆ ಮಾಡಲು ಪ್ರಯತ್ನಿಸಬೇಕು. ವಿಕಲಚೇತನರನ್ನು ಮತ್ತು ವಿಶೇಷ ವರ್ಗದ ಜನರಿಗೆ ವೇತನ ತಾರತಮ್ಯ ಮಾಡಲು ಯಾವುದೇ ಸಂಧರ್ಭದಲ್ಲಿ ಅವಕಾಶವಿರುವುದಿಲ್ಲ ಇತರೆ ಸಾಮಾನ್ಯ ಕೆಲಸಗಾರರಿಗೆ ನಿಗಧಿಪಡಿಸಿದ ರೀತಿಯಲ್ಲಿಯೇ, ಎಲ್ಲರಿಗೂ ಸಮಾನ ವೇತನ ನೀಡಬೇಕಾಗಿದೆ. ಆದಷ್ಟು ಸಾಧ್ಯವಾದ ಮಟ್ಟಿಗೆ ಅಂಗವಿಕಲರಿಗೆ ವಾಸಿಸುವ ಸ್ಥಳದಲ್ಲಿಯೇ, ಕಾಮಗಾರಿಗಳ ಕೆಲಸವನ್ನು ಗೊತ್ತುಪಡಿಸಿ ನೀಡಬೇಕು. ಅಂಗವಿಕಲ ವ್ಯಕ್ತಿಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾರ್ಯಕ್ಷೇತ್ರದಲ್ಲಿ ಕಾಯಕ ಬಂಧು ಆಗಿ ಕೆಲಸ ನಿರ್ವಹಿಸಲು ಆದ್ಯತೆಯನ್ನು ನೀಡಬೇಕು. ಇದಲ್ಲದೇ, ಕಾರ್ಮಿಕನಾಗಿ ಕೆಲಸಗಾರರಿಗೆ ಬೇಕಾದ ಕುಡಿಯುವ ನೀರು ಮತ್ತು ಮಹಿಳಾ ಕೆಲಸಗಾರರ ಸಣ್ಣ ವಯಸ್ಸಿನ ಮಕ್ಕಳ ಲಾಲನೆ ಪಾಲನೆಯಂತಹ ಕೆಲಸವನ್ನು ಕಾಮಗಾರಿ ಸ್ಥಳದಲ್ಲಿ ನೀಡಬೇಕು. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನಿರ್ವಹಿಸುವ ವಿಕಲಚೇತನ ಕೂಲಿ ಕಾರ್ಮಿಕರನ್ನು ಕಾಮಗಾರಿಯ ಸ್ಥಳದಲ್ಲಿ ಗೌರವದಿಂದ ಕಾಣಬೇಕು. ಯಾವುದೇ ಸಂಧರ್ಭದಲ್ಲಿ ಅವರನ್ನು ಅವಮಾನಿಸಬಾರದು, ಮನಸ್ಸಿಗೆ ನೋವು ಉಂಟಾಗದಂತೆ ನಡೆದುಕೊಳ್ಳಬೇಕು. ಇವುಗಳ ಕುರಿತು ಕೆಲಸಗಾರರಲ್ಲಿ ತಿಳುವಳಿಕೆ ಮತ್ತು ಜಾಗೃತಿ ಮೂಡಿಸಬೇಕು. ಅಂಗವಿಕಲರಿಗೆಲ್ಲರಿಗೂ 100 ದಿನಗಳ ಖಾತರಿ ಉದ್ಯೋಗವನ್ನು ದೊರಕಿಸುವಂತೆ ಮಾಡಲು ಕ್ರಮವಹಿಸಬೇಕು.

ಅಂಗವಿಕಲರು ಹಾಗೂ ಹಿರಿಯನಾಗರೀಕರು ಕುರಿತಂತೆ, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರತಿ ತಿಂಗಳು ತಮ್ಮ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಎಲ್ಲಾ ಗ್ರಾಮ ಪಂಚಾಯತ್‌ಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಕರೆದು ಒಂದು ಸಭೆಯನ್ನು ಕುರಿತು, ಪರಿಶೀಲನೆಯನ್ನು ನಡೆಸಬೇಕು ಹಾಗೂ ಅವರುಗಳ ಕುಂದು ಕೊರತೆಗಳ ಬಗ್ಗೆ ನಿವಾರಣಾ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಮೇಲೆ ನೀಡಿರುವ ಸೂಚನೆಗಳನ್ನು ತಪ್ಪದೆ ಪಾಲಿಸಲು ಸೂಚಿಸಿದೆ.

2/9/14

(ಮುನೀಷ್ ಮೌದ್ಗಿಲ್)
ಆಯುಕ್ತರು,
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು

S.suttole

**ಪ್ರತಿಯನ್ನು ಈ ಕೆಳಕಂಡ ಅಧಿಕಾರಿಗಳ ಮಾಹಿತಿಗಾಗಿ ಸಲ್ಲಿಸಿದೆ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಅ & ಪಂ.ರಾಜ್ ಇವರ ಆಪ್ತ ಕಾರ್ಯದರ್ಶಿಗಳು.
4. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಅ & ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರಿಗೆ
5. ವಿಶೇಷ ಆಯುಕ್ತರು (ಅರಣ್ಯ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಅ & ಪಂ.ರಾಜ್ ಇಲಾಖೆ
6. ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಅ & ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರಿಗೆ
7. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು
8. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು
9. ಆಯುಕ್ತರು, ಪಶುಸಂಗೋಪನ ಇಲಾಖೆ, ವಿ.ವಿ.ಟವರ್, ಬೆಂಗಳೂರು
10. ರೇಷ್ಮೆ ಅಭಿವೃದ್ಧಿ ಆಯುಕ್ತರು, ರೇಷ್ಮೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
11. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಬೆಂಗಳೂರು/ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಸಾಮಾಜಿಕ ಅರಣ್ಯ), ಅರಣ್ಯ ಭವನ, ಬೆಂಗಳೂರು
12. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್ ರಸ್ತೆ, ಬೆಂಗಳೂರು
13. ನಿರ್ದೇಶಕರು, ಮೀನುಗಾರಿಕೆ ಇಲಾಖೆ, ವಿ.ವಿ.ಟವರ್, ಬೆಂಗಳೂರು
14. ಮುಖ್ಯ ಅಭಿಯಂತರರು (ಸಣ್ಣ ನೀರಾವರಿ) ದಕ್ಷಿಣ ವಲಯ ಜಲ ಸಂಪನ್ಮೂಲ ಇಲಾಖೆ ಆನಂದ್‌ರಾವ್ ವೃತ್ತ ಬೆಂಗಳೂರು/ಉತ್ತರ ವಲಯ ಬಿಜಾಪುರ
15. ಮುಖ್ಯ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರ್ ಇಲಾಖೆ, ಬೆಂಗಳೂರು
16. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಬೆಳಗಾಂ/ಗುಲ್ಬರ್ಗ/ಮೈಸೂರು.
17. ರಾಜ್ಯದ ಎಲ್ಲಾ ಒಂಬುಡ್ಸ್‌ಮನ್‌ಗಳಿಗೆ
18. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ
19. ನಿರ್ದೇಶಕರು, ಅಬ್ದುಲ್ ನಜೀರ್‌ಸಾಬ್, ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಲಲಿತಮಹಲ್ ರಸ್ತೆ, ಮೈಸೂರು-570011.
20. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳು
21. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅ & ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು
22. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಆಯುಕ್ತಾಲಯದ ಎಲ್ಲಾ ಅಧಿಕಾರಿಗಳಿಗೆ
23. ಶ್ರೀ. ಶ್ರೀನಿವಾಸ ಮಾರಂಗಪ್ಪನವರ್ ವಿಶೇಷಾಧಿಕಾರಿ ಗಣಕಕೋಶ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಇಲಾಖಾ ವೆಬ್ ಸೈಟ್‌ನಲ್ಲಿ ಅಳವಡಿಸಲು ಕೋರಿದೆ.
24. ಶ್ರೀ. ವೈ. ಮಹಾಂಕಾಳಪ್ಪ ಸಂಪಾದಕರು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿಗಳವರ ಮಾಹಿತಿಗಾಗಿ ಹಾಗೂ ಇದನ್ನು ಕರ್ನಾಟಕ ವಿಕಾಸದಲ್ಲಿ ಪ್ರಕಟಿಸಲು ಕೋರಿದೆ.
25. M/s Effia Technologies, ಅವರಿಗೆ www.end2endsolutions.comನಲ್ಲಿ ಪ್ರಕಟಿಸಲು/ಅಳವಡಿಸಲು ಕೋರಿದೆ.
26. ಹೆಚ್ಚಿನ ಪ್ರತಿಗಳು/ಮಹಾ ಕಡತಕ್ಕೆ

S.suttole

## ಅನುಬಂಧ – 1

ವಿಕಲಚೇತನರು ತಮ್ಮ ಅಂಗವೈಕಲ್ಯತೆಯ ಆಧಾರದ ಮೇಲೆ ವಿವಿಧ ವರ್ಗದ ವ್ಯಕ್ತಿಗಳು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮಾಡಬಹುದಾದ ಕೆಲಸಗಳು ಮತ್ತು ಗುರುತಿಸಲಾದ ಕಾಮಗಾರಿಗಳ ವಿವರ:

### I. ದೈಹಿಕ ಅಂಗವಿಕಲತೆಯುಳ್ಳವರು ದುರ್ಬಲವಾದ ಒಂದು ಕೈಯಿಂದ ಮಾಡಬಹುದಾದ ಕೆಲಸಗಳು

1) ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು.
2) ಗಿಡ ನೆಡುವುದು
3) ಬಾಂಡಲಿಗೆ ಮಣ್ಣು /ಜಲ್ಲಿ ತುಂಬುವುದು
4) ಬಂಡಿಂಗ್ ಮಾಡುವುದು.
5) ಮಕ್ಕಳನ್ನು ನೋಡಿಕೊಳ್ಳಲು ಸಹಾಯ ಮಾಡುವುದು
6) ಸಿಮೆಂಟ್ ಮತ್ತು ಇಟ್ಟಿಗೆ ಸಾಗಿಸುವುದು.
7) ಹೊಸ ಕಟ್ಟಡಗಳಿಗೆ ನೀರು ಹಾಕುವುದು
8) ನೀರು ಹನಿಸುವುದು, ಕಲ್ಲುಗಳನ್ನು ಇಡುವುದು.

### II. <u>ಎರಡು ಕೈಗಳು ದುರ್ಬಲವಿರುವ ಅಂಗವಿಲಕಲರು ಮಾಡಬಹುದಾದ ಕೆಲಸಗಳು</u>

ಕೆಲಸಗಾರರ ಮಕ್ಕಳನ್ನು ನೋಡಿಕೊಳ್ಳುವುದಕ್ಕೆ ಸಹಾಯ ಮಾಡುವುದು (ಈ ಕೆಲಸದಲ್ಲಿ ಅಂಗವಿಕಲರ ಕುಟುಂಬದ ಸದಸ್ಯರು ಅಥವಾ ಅವರ ಮಕ್ಕಳೂ ಸಹ ಇವರಿಗೆ ಸಹಾಯ ಮಾಡಬಹುದು. ಇಂತಹ ಮಾನವೀಯ ಅಂತಃಕರಣದ ಸೇವಾ ಮನೋಭಾವದಿಂದ ಅಂಗವಿಕಲ ಕೆಲಸಗಾರರಲ್ಲಿ ಹೆಚ್ಚಿನ ಉತ್ಸಾಹ, ಆತ್ಮ ವಿಶ್ವಾಸ ತುಂಬಬಹುದು.

### III. ಒಂದು ಕಾಲು ದುರ್ಬಲ ಇರುವ ಅಂಗವಿಕಲರು ಮಾಡಬಹುದಾದ ಕೆಲಸಗಳು:

| ಒಬ್ಬರ ಸಹಾಯದಿಂದ ಮಾಡಬಹುದಾದ ಕೆಲಸಗಳು | ಒಬ್ಬರೆ ಸ್ವತಂತ್ರವಾಗಿ ಮಾಡಬಹುದಾದ ಕೆಲಸಗಳು |
|---|---|
| 1. ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು | 1. ಕುಡಿಯು ನೀರಿನ ವ್ಯವಸ್ಥೆ ಮಾಡುವುದು |
| 2. ಕೆಲಸಗಾರರ ಮಕ್ಕಳ್ಳನ್ನು ನೋಡಿಕೊಳ್ಳಲು ಸಹಾಯ ಮಾಡುವುದು. | 2. ಕೆಲಸಗಾರರ ಮಕ್ಕಳ್ಳನ್ನು ನೋಡಿಕೊಳ್ಳಲು ಸಹಾಯ ಮಾಡುವುದು. |
| 3. ಗಿಡ ನೆಡುವುದು | 3. ಗಿಡ ನೆಡುವುದು |
| 4. ಹೊಸದಾಗಿ ನಿರ್ಮಾಣ ಮಾಡಿದ ಗೋಡೆಗೆ ನೀರು ಹಾಕುವುದು. | 4. ನೀರಾವರಿಗಾಗಿ ಕಾಲುವೆಗೆ ಹಳ್ಳ ತೋಡುವುದು |
| 5. ಬಾಂಡಲಿಗೆ ಮಣ್ಣು –ಜಲ್ಲಿ ತುಂಬುವುದು | 5. ಮಣ್ಣು ಸುರಿಯುವುದು. |
| | 6. ಹಳ್ಳದಿಂದ ಮಣ್ಣು ತೆಗೆಯುವುದು/ಟ್ರಾಲಿಗೆ ತುಂಬುವುದು |
| | 7. ಕಟ್ಟಡ ನಿರ್ಮಾಣ – ಕಾಂಕ್ರೀಟ್ ಸಾಮಾಗ್ರಿಗಳನ್ನು ಸರಿಪಡಿಸುವುದು |
| | 8. ಕಾಂಕ್ರೀಟ್ ಸಾಮಗ್ರಿಗಳನ್ನು ಒಂದೆಡೆಯಿಂದ ಮತ್ತೊಂದೆಡೆ ಸಾಗಿಸುವುದು. |
| | 9. ಸಿಮೆಂಟ್ ಮತ್ತು ಇಟ್ಟಿಗೆ ಸಾಗಿಸುವುದು. |
| | 10. ಮರಳು –ಜಲ್ಲಿಗಳನ್ನು ಕಬ್ಬಿಣದ ಡಬ್ಬಿಗೆ ತುಂಬುವುದು. |
| | 11. ಹೊಸದಾಗಿ ನಿರ್ಮಾಣ ಮಾಡಿದ ಗೋಡೆಗೆ ನೀರು ಹಾಕುವುದು. |
| | 12. ಆಳವಾದ ಬಾವಿಯಲ್ಲಿ ತೆಗೆದ ಮಣ್ಣನ್ನು ಬಾಂಡಲಿಯಲ್ಲಿ ತುಂಬಿ ಹೊರ ಸಾಗಿಸುವುದು. |
| | 13. ಬಾವಿಯಿಂದ ಕೆಸರು ಎತ್ತಲು ಸಹಾಯ ಮಾಡುವುದು. |
| | 14. ಟ್ರಾಲಿಗೆ ಕೆಸರನ್ನು ಸಾಗಿಸುವುದು. |
| | 15. ಹೂಳನ್ನು ಅಗೆದು ಕೆರೆಯಿಂದ ಹೊರಹಾಕುವುದು. |
| | 16. ಕೆಲಸದ ತ್ಯಾಜ್ಯವನ್ನು ಡಬ್ಬಗಳಿಗೆ ತುಂಬುವುದು. |
| | 17. ಸಾಮಗ್ರಿಗಳನ್ನು ಬಾಂಡಲಿಯಿಂದ ಟ್ರಾಲಿಗೆ ತುಂಬುವುದು. |
| | 18. ಕಲ್ಲುಗಳನ್ನು ಸಾಗಿಸುವುದು. |
| | 19. ಸರಿಯಾದ ಸ್ಥಳದಲ್ಲಿ ಕಲ್ಲನ್ನು ಜೋಡಿಸುವುದು. |
| | 20. ನೆಲ ಸಮತಟ್ಟು ಮಾಡುವುದು. |
| | 21. ಬಂಡಿಂಗ್ ಮಾಡುವುದು |
| | 22. ನೀರು ಸಂರಕ್ಷಣಾ ಪ್ರದೇಶದಲ್ಲಿ ಗುಳಿ ತೋಡುವುದು. |
| | 23. ಗುಳಿಯಿಂದ ತೋಡಿದ ಮಣ್ಣನ್ನು ಬೇರೆಡೆ ವರ್ಗಾಯಿಸುವುದು. |
| | 24. ರಸ್ತೆ ನಿರ್ಮಿಸುವುದು. |
| | 25. ಕಚ್ಚಾ ರಸ್ತೆಯನ್ನು ಬರಲುಗಳಿಂದ ಗುಡಿಸುವುದು. |
| | 26. ನೀರು ಚುಮುಕಿಸುವುದು, ಬೆಣಚು ಕಲ್ಲು ಹಾಕುವುದು. |

S.suttole

IV. **ಎರಡು ಕಾಲುಗಳು ದುರ್ಬಲವಾಗಿರುವ ಅಂಗವಿಕಲರು ಮಾಡುವ ಕೆಲಸಗಳು:**

ಎ. ಕೆಲಸಗಾರರ ಮಕ್ಕಳನ್ನು ನೋಡಿಕೊಳ್ಳಲು ಸಹಾಯ ಮಾಡುವುದು

ಬಿ. ಗಿಡ ನೆಡುವುದು

ಸಿ. ಬಾಂಡಲಿಗೆ ಮರಳು- ಜಲ್ಲಿ ತುಂಬುವುದು

ಡಿ. ಬಾವಿಯಿಂದ ಕೆಸರು ಮಣ್ಣನ್ನು ಹೊರ ಹಾಕುವುದು (ಒಂದು ದೊಡ್ಡ ಡಬ್ಬದಲ್ಲಿ ತುಂಬಿದ ಮಣ್ಣನ್ನು ಸಾಗಿಸಲು 10-15 ಮಂದಿ ಬೇಕು. ಇದರ ಬದಲು ಸಣ್ಣ ಡಬ್ಬದಲ್ಲಿ ಮಣ್ಣು ತುಂಬಿದ ಡಬ್ಬ ಇದ್ದರೆ, 3-4 ಮಂದಿ ಅಂಗವಿಕಲರು ಒಗ್ಗೂಡಿ ಸಾಗಿಸಬಲ್ಲರು. ಇದರಿಂದ ಯೋಜಿತ ಕೆಲಸ ಬಹಳ ಬೇಗ ಆಗುತ್ತದೆ. ಆದ್ದರಿಂದ ಅಂಗವಿಕಲರನ್ನು ಉಪಯುಕ್ತ ಕೆಲಸಗಾರರಾಗಿ ಬಳಸಿಕೊಳ್ಳಬಹುದು.

V. **ಒಂದು ಕೈ ಮತ್ತು ಒಂದು ಕಾಲು ದುರ್ಬಲರಾದ ಅಂಗವಿಕಲರು ಮಾಡಬಹುದಾದ ಕೆಲಸಗಳು:**

| ಒಬ್ಬರ ಸಹಾಯದಿಂದ ಮಾಡುವ ಕೆಲಸ | ಒಬ್ಬರೆ ಸ್ವತಂತ್ರವಾಗಿ ಮಾಡಬಹುದಾದ ಕೆಲಸ |
|---|---|
| 1. ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು | 1. ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು |
| 2. ಕೆಲಸಗಾರರ ಮಕ್ಕಳನ್ನು ನೋಡಿಕೊಳ್ಳಲು ಸಹಾಯ ಮಾಡುವುದು | 2. ಕೆಲಸಗಾರರ ಮಕ್ಕಳನ್ನು ನೋಡಿಕೊಳ್ಳಲು ಸಹಾಯ ಮಾಡುವುದು |
| 3. ಗಿಡ ನೆಡುವುದು | 3. ಗಿಡ ನೆಡುವುದು |
| 4. ಹೊಸದಾಗಿ ನಿರ್ಮಾಣ ಮಾಡಿದ ಗೋಡೆಗೆ ನೀರು ಹಾಕುವುದು | 4. ಹೊಸದಾಗಿ ನಿರ್ಮಾಣ ಮಾಡಿದ ಗೋಡೆಗೆ ನೀರು ಹಾಕುವುದು |
| 5. ಬಾಂಡಲಿಗೆ ಮಣ್ಣು-ಜಲ್ಲಿ ತುಂಬುವುದು. | 6. ಬಾಂಡಲಿಗೆ ಮಣ್ಣು-ಜಲ್ಲಿ ತುಂಬುವುದು. |

VI. **ಗೂನು ಬೆನ್ನಿನ ಅಂಗವಿಕಲರು ಮಾಡಬಹುದಾದ ಕೆಲಸಗಳು:**

a) ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು

b) ಕೆಲಸಗಾರರ ಮಕ್ಕಳನ್ನು ನೋಡಿಕೊಳ್ಳಲು ಸಹಾಯ ಮಾಡುವುದು

c) ಗಿಡ ನೆಡುವುದು

d) ಹೊಸದಾಗಿ ನಿರ್ಮಾಣ ಮಾಡಿದ ಗೋಡೆಗೆ ನೀರು ಹಾಕುವುದು

e) ಬಾಂಡಲಿಗೆ –ಜಲ್ಲಿ ತುಂಬುವುದು, ನೀರು ಚುಮುಕಿಸುವುದು.

VII. **ಅಂಧರು ಮಾಡಬಹುದಾದ ಕೆಲಸಗಳ ವಿವರಗಳು ಇಂತಿವೆ.**

ಎ. ಒಂದು ಕಣ್ಣು ದುರ್ಬಲವಾದ ಅಂಗವಿಕಲರು ಮಾಡಬಹುದಾದ ಕೆಲಸಗಳು;

| | |
|---|---|
| 1 ಕುಡಿಯುವ ನೀರು ಒದಗಿಸುವುದು | 2 ಮಕ್ಕಳನ್ನು ನೋಡಿಕೊಳ್ಳಲು ಸಹಾಯ ಮಾಡುವುದು |
| 3 ಗಿಡ ನೆಡುವುದು | 4 ನೀರಾವರಿ –ಕಲುವೆಗೆ ಹಳ್ಳ ತೋಡುವುದು. |
| 5 ಹಳ್ಳಕ್ಕೆ ಮಣ್ಣು ತುಂಬುವುದು. | 6 ಮಣ್ಣನ್ನು ಹೊರ ಹಾಕುವುದು ಅಥವಾ ಟ್ರಾಲಿಗಳಲ್ಲಿ ಸಾಗಿಸುವುದು. |
| 7 ಕಟ್ಟಡಕ್ಕೆ ಕಾಂಕ್ರೀಟ್ ತಯಾರಿಸುವುದು. | 8 ಕಾಂಕ್ರೀಟ್ ಇತರೆ ಸಾಮಗ್ರಿ ಒಂದೆಡೆಯಿಂದ ಮತ್ತೊಂದೆಡೆ ಕೊಡುವುದು |
| 9 ಸಿಮೆಂಟ್ ಮತ್ತು ಇಟ್ಟಿಗೆ ಕೊಡುವುದು | 10 ಬಾಂಡಲಿಗೆ ಗಾರೆ ಅಥವಾ ಮಣ್ಣು ತುಂಬುವುದು. |
| 11 ಹೊಸ ಗೋಡೆಗೆ ನೀರು ಹಾಕುವುದು. | 12 ಬಾವಿಯಿಂದ ಕೆಸರು ಎತ್ತಲು ಸಹಾಯ ಮಾಡುವುದು. |
| 13 ಟ್ರಾಲಿಯಿಂದ ಕೆಸರನ್ನು ಹೊರ ಸಾಗಿಸುವುದು | 14 ಹೊಳನ್ನು ಅಗೆದು ಕೆರೆಯಿಂದ ಹೊರ ಹಾಕುವುದು. |
| 15 ತ್ಯಾಜ್ಯವನ್ನು ಕಬ್ಬಿಣದ ಡಬ್ಬಗಳಿಗೆ ಹಾಕುವುದು | 16 ಸಾಮಗ್ರಿಗಳನ್ನು ಬಾಂಡಲಿಯಿಂದ ಟ್ರಾಲಿಗೆ ತುಂಬುವುದು. |
| 17 ಕಲ್ಲುಗಳನ್ನು ಸಾಗಿಸುವುದು | 18 ಸರಿಯಾದ ಸ್ಥಳದಲ್ಲಿ ಕಲ್ಲನ್ನು ಜೋಡಿಸುವುದು |
| 19 ನೆಲ ಸಮತಟ್ಟು ಮಾಡುವುದು | 20 ಬಂಡಿಂಗ್ ಮಾಡುವುದು |
| 21 ನೀರು ಸಂರಕ್ಷಣಾ ಪ್ರದೇಶದಲ್ಲಿ ಗುಳಿ ತೋಡುವುದು. | 22 ಗುಳಿ ತೋಡಿದ್ದರಿಂದ ಬಂದ ಮಣ್ಣನ್ನು ವಿವಿಧ ಸ್ಥಳದಲ್ಲಿ ಸಮತಟ್ಟು ಮಾಡುವುದು |
| 23 ನೀರು ಚುಮುಕಿಸುವುದು, ಬೆಣಚು ಕಲ್ಲು ಹಾಕುವುದು | |

ಬಿ. ಸಂಪೂರ್ಣ ಕಣ್ಣು ಕಾಣದವರು ಮಾಡಬಹುದಾದ ಕೆಲಸಗಳು:

i. ಗಿಡ ನೆಡುವುದು

ii. ಬಾಂಡಲಿಗೆ ಮಣ್ಣು - ಜಲ್ಲಿ ತುಂಬುವುದು,

iii. ಕುಡಿಯುವ ನೀರು ಒದಗಿಸುವುದು

ಕಾರ್ಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಅಂಧ ವ್ಯಕ್ತಿಯ ಕುಟಂಬದ ಸದಸ್ಯರು, ತಮ್ಮ ಮನೆಯ ಸದಸ್ಯ ಮಾಡುತ್ತಿರುವ ಕೆಲಸ ನೋಡಿ, ಅಂಗವಿಕಲ ವ್ಯಕ್ತಿ ತಮಗೆ ಹೊರೆಯಲ್ಲ, ಹೇಗೆ ಆತ ಮನೆಯ ಆದಾಯಕ್ಕೆ ನೆರವಾಗಬಲ್ಲ ಎಂಬ ವಾಸ್ತವಾಂಶವನ್ನು ಅರ್ಥ ಮಾಡಿಕೊಳ್ಳುತ್ತಾರೆ.

ಅಂಗವಿಕಲ ವ್ಯಕ್ತಿಗಳು ತಾಳ್ಮೆಯಿಂದ ತರಬೇತಿ ಪಡೆಯಬೇಕು. ಅಗತ್ಯವಾದ ತರಬೇತಿಯನ್ನು, ಕೆಲಸ ನಡೆಯುವಾಗಲೆ ನೀಡಲಾಗುತ್ತೆ. ಹೆಜ್ಜೆ ಅಳತೆ ಮೂಲಕ ಅಂತರ ವ್ಯಾಪ್ತಿಯನ್ನು ತಿಳಿಯಬಹುದು.

## VIII. ಭಾಗಶಃ ನೋಡಲು ಸಾಧ್ಯವಾಗುವ (ಮಂಜು –ಮಂಜಾಗಿ) ಕಣ್ಣುಳ್ಳವರು ಮಾಡಬಹುದಾದ ಕೆಲಸಗಳು:

| | |
|---|---|
| 1. ಕುಡಿಯುವ ನೀರು ಒದಗಿಸುವುದು | 2 ಮಕ್ಕಳನ್ನು ನೋಡಿಕೊಳ್ಳಲು ಸಹಾಯ ಮಾಡುವುದು |
| 3 ಗಿಡ ನೆಡುವುದು | 4 ನೀರಾವರಿ ಕಾಲುವೆಗೆ ಹಳ್ಳ ತೋಡುವುದು |
| 5 ಹಳ್ಳಕ್ಕೆ ಮಣ್ಣು ತುಂಬುವುದು | 6 ಮಣ್ಣನ್ನುಹೊರ ಹಾಕುವುದು ಅಥವಾ ಟ್ರಾಲಿಗಳಲ್ಲಿ ಸಾಗಿಸುವುದು |
| 7 ಕಟ್ಟಡಕ್ಕೆ ಕಾಂಕ್ರೀಟ್ ತಯಾರಿಸುವುದು | 8 ಕಾಂಕ್ರೀಟ್ ಇತರೆ ಸಾಮಗ್ರಿ ಒಂದೆಡೆಯಿಂದ ಮತ್ತೊಂದೆಡೆ ಕೊಡುವುದು. |
| 9 ಸಿಮೆಂಟ್ ಮತ್ತು ಇಟ್ಟಿಗೆ ಕೊಡುವುದು | 10 ಬಾಂಡಲಿಗೆ ಗಾರೆ ಅಥವಾ ಮಣ್ಣು ತುಂಬುವುದು |
| 11 ಹೊಸ ಗೋಡೆಗೆನೀರು ಹಾಕುವುದು | 12 ಬಾವಿಯಿಂದ ಕೆಸರು ಎತ್ತಲು ಸಹಾಯ ಮಾಡುವುದು |
| 13 ಟ್ರಾಲಿಯಿಂದ ಕೆಸರನ್ನು ಹೊರ ಸಾಗಿಸುವುದು | 14 ಹೊಳನ್ನು ಅಗೆದು ಕೆರೆಯಿಂದ ಹೊರ ಹಾಕುವುದು |
| 15 ತ್ಯಾಜ್ಯವನ್ನು ಕಬ್ಬಿಣದ ಡಬ್ಬಗಳಿಗೆ ಹಾಕುವುದು | 16 ಸಾಮಗ್ರಿಗಳನ್ನು ಬಾಂಡಲಿಯಿಂದ ಟ್ರಾಲಿಗೆ ತುಂಬುವುದು. |
| 17 ಕಲ್ಲುಗಳನ್ನು ಸಾಗಿಸುವುದು | 18 ಸರಿಯಾದ ಸ್ಥಳದಲ್ಲಿ ಕಲ್ಲನ್ನು ಜೋಡಿಸುವುದು |
| 19 ನೆಲ ಸಮತಟ್ಟು ಮಾಡುವುದು | 20 ಬಂಡಿಂಗ್ ಮಾಡುವುದು |
| 21 ನೀರು ಸಂರಕ್ಷಣಾ ಪ್ರದೇಶದಲ್ಲಿ ಗುಳಿ ತೋಡುವುದು | 22 ಗುಳಿ ತೋಡಿದ್ದರಿಂದ ಬಂದ ಮಣ್ಣನ್ನು ವಿವಿಧ ಸ್ಥಳದಲ್ಲಿ ಸಮತಟ್ಟು ಮಾಡುವುದು |
| 23 ನೀರು ಚುಮುಕಿಸುವುದು, ಬೆಣಚು ಕಲ್ಲು ಹಾಕುವುದು | |

## IX. ಬುದ್ಧಿ ಮಾಂಧ್ಯ ವ್ಯಕ್ತಿಗಳು ಮಾಡಬಹುದಾದ ಕೆಲಸಗಳು:

ಎ. ಬಹಳಷ್ಟು ಬುದ್ಧಿ ಮಾಂಧ್ಯವಾಗಿರುವ ವ್ಯಕ್ತಿಗಳು ಮಾಡಬಹುದಾದ ಕೆಲಸಗಳು

| | |
|---|---|
| 1.ಕುಡಿಯುವ ನೀರು ಒದಗಿಸುವುದು | 2. ಮಕ್ಕಳನ್ನು ನೋಡಿಕೊಳ್ಳಲು ಸಹಾಯ ಮಾಡುವುದು |
| 3. ಗಿಡ ನೆಡುವುದು | 4. ನೀರಜಾವರಿ-ಕಾಲುವೆಗೆ ಹಳ್ಳ ತೋಡುವುದು |
| 5. ಹಳ್ಳಕ್ಕೆ ಮಣ್ಣು ತುಂಬುವುದು | 6. ಮಣ್ಣನ್ನು ಹೊರ ಹಾಕುವುದು ಅಥವಾ ಟ್ರಾಲಿಗಳಲ್ಲಿ ಸಾಗಿಸುವುದು |
| 7. ಕಾಂಕ್ರೀಟ್ ಇತರೆ ಸಾಮಗ್ರಿ ಒಂದೆಡೆಯಿಂದ ಮತ್ತೊಂದೆಡೆ ಕೊಡುವುದು | 8. ಸಿಮೆಂಟ್ ಮತ್ತು ಇಟ್ಟಿಗೆ ಕೊಡುವುದು |
| 9. ಬಾಂಡಲಿಗೆ ಗಾರೆ ಅಥವಾ ಮಣ್ಣು ತುಂಬುವುದು | 10. ಟ್ರಾಲಿಯಿಂದ ಕೆಸರನ್ನು ಹೊಸ ಸಾಗಿಸುವುದು |
| 11. ಹೂಳನ್ನು ಅಗೆದು ಕೆರೆಯಿಂದ ಹೊಸ ಹಾಕುವುದು | 12. ತ್ಯಾಜ್ಯವನ್ನು ಕಬ್ಬಿಣದ ಡಬ್ಬಗಳಿಗೆ ಹಾಕುವುದು |
| 13. ಸಾಮಗ್ರಿಗಳನ್ನು ಬಾಂಡಲಿಯಿಂದ ಟ್ರಾಲಿಗೆ ತುಂಬುವುದು | 14. ಕಲ್ಲುಗಳನ್ನು ಸಾಗಿಸುವುದು |
| 15. ಸರಿಯಾದ ಸ್ಥಳದಲ್ಲಿ ಕಲ್ಲನ್ನು ಜೋಡಿಸುವುದು | 16. ನೆಲ ಸಮತಟ್ಟು ಮಾಡುವುದು |
| 17. ಬಂಡಿಂಗ್ ಮಾಡುವುದು | 18. ನೀರು ಸಂರಕ್ಷಣಾ ಪ್ರದೇಶದಲ್ಲಿ ಗುಳಿ ತೋಡುವುದು |

ಸೂಚನೆ: ಮೇಲ್ಕಂಡ ಅಂಗವಿಕಲರಿಗೆ ಹಂತ ಹಂತವಾಗಿ ಮತ್ತು ನಿಧಾನವಾಗಿ ಹೇಳಬೇಕು. ಒಮ್ಮೆ ಅವರು ಉತ್ತಮವಾಗಿ ಅರ್ಥ ಮಾಡಿಕೊಂಡರೆ, ತಮ್ಮ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿಕೊಂಡು ಹೋಗುತ್ತಾರೆ.

ಬಿ. ಭಾಗಶಃ ಬುದ್ಧಿ ಮಾಂದ್ಯರು ಮಾಡಬಹುದಾದ ಕೆಲಸಗಳು :

| | |
|---|---|
| 1. ಕುಡಿಯುವ ನೀರು ಒದಗಿಸುವುದು | 2. ಮಕ್ಕಳನ್ನು ನೋಡಿಕೊಳ್ಳಲು ಸಹಾಯ ಮಾಡುವುದು |
| 3. ಗಿಡ ನೆಡುವುದು | 4. ಮಣ್ಣಿನಿಂದ ಮುಚ್ಚುವುದು |
| 7. ಮಣ್ಣನ್ನು ಬಾಂಡಲಿಯಲ್ಲಿ ಅಥವಾ ಟ್ರಾಲಿಯಲ್ಲಿ ತುಂಬಿ ಹೊರ ಹಾಕುವುದು | 6. ಬಾಂಡಲಿಗೆ ಮಣ್ಣು –ಜಲ್ಲಿ ತುಂಬುವುದು |
| 7. ಕೆಸರು ಮಣ್ಣನ್ನು ಟ್ರಾಲಿಯಿಂದ ಸಾಗಿಸುವುದು | 8. ಹೊಸ ಗಾರೆಗೆ ನೀರು ಚುಮುಕಿಸುವುದು ಇಟ್ಟಿಗೆ ಕೊಡುವುದು |

ಇಂಥ ವ್ಯಕ್ತಿಗಳು ಇತರೆ ಕೆಲಸಗಾರರಿಗೆ ಉತ್ತಮವಾಗಿ ನೆರವಾಗಬಲ್ಲರು. ಮಣ್ಣು ಮತ್ತಿತರ ತ್ಯಾಜ್ಯಗಳನ್ನು ತೆಗೆಯಲು ಮತ್ತು ಬಾಂಡಲಿಯಿಂದ ಹೊರ ಸಾಗಿಸಲು ನೆರವಾಗಬಲ್ಲರು.

ಬುದ್ಧಿ ಮಾಂದ್ಯತೆಯಿಂದ ಬಳಲುತ್ತಿರುವವರು ಚಿಕಿತ್ಸೆ ಪಡೆಯುತ್ತಿದ್ದರೆ ಅಂತಹವರು ಸಹ ಎಲ್ಲಾ ಕೆಲಸಗಳನ್ನು ಮಾಡಬಹುದು. ಇವರುಗಳು ಮಾಡುವ ಕೆಲಸದ ಪ್ರಮಾಣದಲ್ಲಿ ಕಡಿಮೆಯಿರುತ್ತದೆ.

ಹಾಗೇಯೇ ಕಿವುಡು ಮತ್ತು ಮೂಕತನದಿಂದ ಬಳಲುತ್ತಿರುವ ವ್ಯಕ್ತಿಗಳಿಗೆ ತಿಳಿಯುವ ಸಂಕೇತ ಭಾಷೆಯಲ್ಲಿ ತಿಳಿಸಿದರೆ, ಅತ್ಯುತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಬಲ್ಲರು.

ಆಯುಕ್ತರು
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

S.suttole

ಅನುಬಂಧ-2

## ಹಿರಿಯ ನಾಗರಿಕರು ಮಹಾತ್ಮ ಗಾಂಧಿ ರಾಷ್ಟ್ರಿಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ಮಾಡಬಹುದಾದಂತಹ ಸಂಭವನೀಯ ಕೆಲಸಗಳ ವರ್ಗೀಕರಣ

| | |
|---|---|
| 1 ಕುಡಿಯುವ ನೀರು ಒದಗಿಸುವುದು. | 2 ಮಕ್ಕಳನ್ನು ನೋಡಿಕೊಳ್ಳಲು ಸಹಾಯ ಮಾಡುವುದು |
| 3 ಗಿಡ ನೆಡುವುದು | 4 ನೀರಾವರಿ – ಕಾಲುವೆಗೆ ಹಳ್ಳ ತೋಡುವುದು |
| 5 ಹಳ್ಳಕ್ಕೆ ಮಣ್ಣು ತುಂಬುವುದು | 6 ಮಣ್ಣನ್ನು ಹೊರ ಹಾಕುವುದು ಅಥವಾ ಟ್ರಾಲಿಗಳಲ್ಲಿ ಸಾಗಿಸುವುದು. |
| 7 ಕಟ್ಟಡ ನಿರ್ಮಾಣ – ಕಾಂಕ್ರಿಟ್ ತಯಾರಿಸುವುದು | 8 ಕಾಂಕ್ರಿಟ್ ಮತ್ತು ಇತರೆ ಸಾಮಗ್ರಿಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವುದು. |
| 9 ಸಿಮೆಂಟ್ ಮತ್ತು ಇಟ್ಟಿಗೆ ಕೊಡುವುದು | 10 ಬಾಂಡಲಿಗೆ ಮರಳು ಅಥವ ಕಲ್ಲನ್ನು ತುಂಬುವುದು |
| 11 ಹೊಸದಾಗಿ ನಿರ್ಮಾಣ ಮಾಡಿದ ಗೋಡೆಗೆ ನೀರು ಹಾಕುವುದು. | 12 ಬಾವಿಯನ್ನು ಆಳವಾಡುವುದು –ಬಾವಿಯಲ್ಲಿ ತೆಗೆದ ಮಣ್ಣನ್ನು ಬಾಂಡಲಿಯಲ್ಲಿ ತುಂಬಿ ಹೊರ ಸಾಗಿಸುವುದು. |
| 13 ಬಾವಿಯಿಂದ ಕೆಸರು ಎತ್ತಲು ಸಹಾಯ ಮಾಡುವುದು. | 14 ಟ್ರಾಲಿಯಿಂದ ಕೆಸರನ್ನು ಹೊರ ಸಾಗಿಸುವುದು |
| 15 ಕೆರೆಯಿಂದ ಕೆಸರನ್ನು ತೆಗೆದು ಹೊರ ಹಾಕುವುದು. | 16 ಕೆಲಸದ ತ್ಯಾಜ್ಯವನ್ನು ಕಬ್ಬಿಣದ ಡಬ್ಬಗಳಿಗೆ ಹಾಕುವುದು. |
| 17 ಸಾಮಗ್ರಿಗಳನ್ನು ಬಾಂಡಲಿಯಿಂದ ಟ್ರಾಲಿಗೆ ತುಂಬುವುದು. | 18 ಕಲ್ಲುಗಳನ್ನು ಸಾಗಿಸುವುದು |
| 19 ಸರಿಯಾದ ಸ್ಥಳದಲ್ಲಿ ಕಲ್ಲನ್ನು ಜೋಡಿಸುವುದು | 20 ನೆಲ ಸಮತಟ್ಟು ಮಾಡುವುದು |
| 21 ಬಂಡಿಂಗ್ ಮಾಡುವುದು | 22 ನೀರು ಸಂರಕ್ಷಣಾ ಪ್ರದೇಶದಲ್ಲಿ ಗುಳಿ ತೋಡುವುದು. |
| 23 ವಿವಿಧ ಸ್ಥಳದಲ್ಲಿ ಗುಳಿ ತೋಡಿದ್ದರಿಂದ ಬಂದ ಮಣ್ಣನ್ನು ಸಮತಟ್ಟು ಮಾಡುವುದು | 24 ನೀರು ಚುಮುಕಿಸುವುದು, ಬೆಣಚು ಕಲ್ಲು ಹಾಕುವುದು |

ಆಯುಕ್ತರು
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

S.suttole